ಮಹಾವೀರ ಕಾಸರ, ಶಿವಮೊಗ್ಗ
ಗಂಡನ ಕುಡಿತಕ್ಕೆ ಕಾರಣ ಯಾರು?



'ದೇವನೇ. ಅವನ ನಿಯಮವಿಲ್ಲದೆ ಇಲ್ಲಿ ಗಡಂಗೇ ಇರುತ್ತಿರಲಿಲ್ಲ' ಎಂದನಂತೆ ಗಂಡ.

ಕೆ.ಎಸ್. ಸೋಮೇಶ್ವರ್, ಬೆಂಗಳೂರು
ಜಾಹೀರಾತೊಂದರಲ್ಲಿ ಸಂಚಾರ ನಿಯಂತ್ರಕ ಪೊಲೀಸರು ಬ್ರೇಕ್ ಡ್ಯಾನ್ಸ್ ಮಾಡುತ್ತಾರೆ. ಅಲ್ಲಿ ಟ್ರಾಫಿಕ್ ಜಾಮ್ ಆಗಲ್ಲವೆ?
ಮೇಲಧಿಕಾರಿಗಳು ಬಂದು ಲಾಠಿ ಚಾರ್ಜ್ ಮಾಡಿದ್ದನ್ನು ಶೂಟ್ ಮಾಡಲಿಲ್ಲವಂತೆ.

ಎಲ್.ಐ.ಸಿ. ವಿಜೇಂದ್ರ, ಮೈಸೂರು
ಇಲ್ಲೊಬ್ಬ ಕವಿಯು 'ತುಸು ಕುಡಿಯುವ ಗಂಡನನ್ನು' ಕೊಡು ತಾಯಿ ಎಂದು ಕವನ ಬರೆದಿದ್ದನಲ್ಲ?
ಮ್ಯಾನ್‌ಹೋಲ್ ಕ್ಲೀನರ್ ಇರಬೇಕು. ಆ ವಾಸನೆಯನ್ನು ಹೊಡೆಯಲು ಈ ವಾಸನೆ!

ರಾಮಸ್ವಾಮಿ, ಭೀಮನಕಟ್ಟೆ
ಪಾಕಿಸ್ತಾನದಲ್ಲಿ ಕತ್ತೆಗಳ ಸಂಖ್ಯೆ ತುಂಬಾ ಅಂತೆ. ಭಾರತದಲ್ಲಿ?



ಎರಡು ಕಾಲುಗಳ ಕತ್ತೆಗಳನ್ನು ಸೇರಿಸಿ ಹೇಳಬೇಕೋ, ಬಿಟ್ಟೋ?

ಅನಸೂಯಾ ಟಿ, ಕೇದಿಗೆಮನೆ
ಬದಲಾವಣೆ ಜಗದ ನಿಯಮವೋ, ಪ್ರಕೃತಿ ನಿಯಮವೋ?
ಗಗನ ನಿಯಮ; ಇಂದು ಕಂಡ ಮೋಡ ವಿನ್ಯಾಸ ನಾಳೆ ಕಾಣುವುದಿಲ್ಲ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಮದ್ಯಪ್ರಿಯರ ದಿನ ಯಾವುದು ಸರ್?
ಪ್ರತಿ ಚುನಾವಣೆಯ ಹಿಂದಿನ ದಿನ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಶ್ರಮವಿಲ್ಲದ ಗಳಿಕೆ ಯಾವುದು ಗುರುಗಳೆ?
ಮಾತೃಪ್ರೀತಿ.

ದಿನೇಶ್, ಗುಡ್ಡದೂರು
ಜ್ಯೋತಿಷಿ, ರಾಜಕಾರಣಿ, ಮಠಾಧೀಶರಿಗೆ ವ್ಯತ್ಯಾಸವೇನು?
ಜ್ಯೋತಿಷಿ ಭೂತಗಳನ್ನು ತೋರಿಸುತ್ತಾನೆ, ರಾಜಕಾರಣಿ ಭವಿಷ್ಯವನ್ನು; ಮಠಾಧೀಶ ವರ್ತಮಾನವನ್ನು.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಅಗ್ನಿಶಾಮಕ ದಳದಲ್ಲಿ ಹೆಣ್ಣನ್ನೇಕೆ ನೇಮಿಸಿಕೊಳ್ಳುವುದಿಲ್ಲ?
ಬಾಯ್ಸ್ ಹಾಸ್ಟೆಲ್‌ಗಳಲ್ಲಿ ಪದೇ ಪದೇ ಬೆಂಕಿ ಹೊತ್ತಿಕೊಳ್ಳುವುದನ್ನು ತಪ್ಪಿಸಲು!

ನಾ. ಜ್ಯೋತಿ, ಹೂವಿನಹಡಗಲಿ
ಒಂದು ವೇಳೆ ಆನೆಯು ಸಸ್ಯಾಹಾರಿಯಾಗದೆ ಮಾಂಸಾಹಾರಿ ಆಗಿದ್ದಿದ್ದರೆ?
ಹುಲಿ ಸಿಂಹಗಳು ಆಹಾರ ಸಿಕ್ಕದೆ ಅನಿವಾರ್ಯವಾಗಿ ಸಸ್ಯಾಹಾರಿಗಳಾಗುತ್ತಿದ್ದವು.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಮ್ಯಾಚಿಗೆ ಸೆಳೆಯಲು ಚಿಯರ್ ಗರ್ಲ್ಸ್ ಇರುವಂತೆ ಅಸೆಂಬ್ಲಿಗೆ ಶಾಸಕರನ್ನು ಸೆಳೆಯಲು ಚಿಯರ್ ಗರ್ಲ್ಸ್ ಕೂಡಿಸಿದರೆ ಹೇಗೆ?
ಶಾಸಕರ ಸತಿಯರು ಚೀರುವರಲ್ಲ! ಅಲ್ಲದೆ ಶಾಸಕರಿಗೆ ಪ್ರತ್ಯೇಕ ಚಿಯರ್, ಚಿಯರ್ಸ್ ಮಂದಿಯೇ ಇರುತ್ತಾರೆ.

ಮಲ್ಲಿಕಾರ್ಜುನ, ಸುರಧೇನುಪುರ
ಸತ್ಯಕ್ಕೆ ಸಾವಿಲ್ಲ. ನ್ಯಾಯಕ್ಕೆ?
No Villa.

ವಿ.ಎಸ್. ಹಿಂದೂಪುರ, ಬಳ್ಳಾರಿ
ಪಿಸುಮಾತು ಬಹಳ ದೂರ ಕೇಳಿಸುತ್ತದಂತೆ. ನಿಜವೆ?
ಹೌದು. ಅದಕ್ಕೆ ನೂರಾರು ಕಿವಿಗಳನ್ನು ದಾಟುವ ರಭಸವಿರುತ್ತದೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಸತ್ಯ ಬೂದಿ ಮುಚ್ಚಿದ ಕೆಂಡ. ಸುಳ್ಳು?
ಜೋರಾಗಿ ಡ್ರೆಸ್ ಮಾಡಿಕೊಂಡ ಭಂಡ.

## ಬಹುಮಾನಿತ ಪ್ರಶ್ನೆ

ನಾಗೇಂದ್ರ ಗಂಗೊಳ್ಳಿ, ಬೆಂಗಳೂರು
ಇತ್ತೀಚೆಗೆ ನಮ್ಮ ಫಿಲ್ಮ್‌ಗಳಲ್ಲಿ ಕವಿಗಳ ಗೀತೆಗಳನ್ನು ಬಳಸಿಕೊಳ್ಳುವುದು ಕಡಿಮೆಯಾಗಿರುವುದೇಕೆ?
ಅಷ್ಟೆಲ್ಲ ಕನ್ನಡವನ್ನು ಅರ್ಥ ಮಾಡಿಕೊಳ್ಳುವ ನಿರ್ದೇಶಕರ ಕೊರತೆ.

ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ
ಮಯೂರ ಸಿಂಹಾಸನಕ್ಕೂ, ಶೂನ್ಯ ಸಿಂಹಾಸನಕ್ಕೂ ವ್ಯತ್ಯಾಸವೇನು?
ಎರಡೂ ಪ್ರಭುಗಳದೇ; ಇದು ಅರಸು ಪೀಠ, ಅದು ಅರಸುವವರ ಪೀಠ.

ಕಾವ್ಯಶ್ರೀ, ಶೋರಾಪುರ
ನಿರಾಶೆಯಲ್ಲೂ ಆಶೆಯನ್ನು ಮೂಡಿಸುವುದು ಯಾವುದು?
ಕೊನೆಯ ಪಂದ್ಯದಲ್ಲಿ ನಿರಾಶೆಗೊಳಿಸಿ ಮತ್ತೆ ಮರುವರ್ಷ 'ಕಪ್ ನಮ್ದೇ' ಎನ್ನುವ ಆರ್‌ಸಿಬಿ.

ಬಿ. ಚಂದ್ರೇಗೌಡ, ಬೆಂಗಳೂರು
ಹೆಂಡತಿಯನ್ನು 'ಸತಿಶಿರೋಮಣಿ' ಎನ್ನುವುದೇಕೆ?



ಸತಿಗೆ ಶಿರ ಬಾಗಿ ಮಣಿಯುತ್ತೇನೆ ಎನ್ನುವುದರ ಸೂಚಕವಾಗಿ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಗಣ್ಯ ಪುರುಷರಿಗೆ ಗನ್‌ಮ್ಯಾನ್ ಇರುತ್ತಾನೆ. ಗಣ್ಯ ಸ್ತ್ರೀಗೆ ಗನ್ ವುಮನ್ ಏಕಿರುವುದಿಲ್ಲ?
ಏಕೆಂದರೆ ಸ್ತ್ರೀಯನ್ನು ಮ್ಯಾನ್ ವುಮನ್‌ಗಿಂತಲೂ ಹೆಚ್ಚು ಗಮನಿಸುತ್ತಾನೆ, ಫಾಲೊ ಮಾಡುತ್ತಾನೆ.

ಜಿ. ಸುಬ್ರಹ್ಮಣ್ಯ, ಬೆಂಗಳೂರು
ಭರತನು ಪಾದುಕೆಗಳನ್ನು ಪಡೆದ ನಂತರ ಶ್ರೀರಾಮನು ಬರಿಗಾಲಿನಲ್ಲಿ ಓಡಾಡುತ್ತಿದ್ದನೆ?
ಹೀಗಾದೀತೆಂದು ಲಕ್ಷ್ಮಣನು ಸ್ಪೇರ್ ಸೆಟ್ ತಂದಿದ್ದನಂತೆ.

■ ರಾಮ್